ಕರ್ನಾಟಕ ಸರ್ಕಾರ

*ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.*

ಸಂಖ್ಯೆ: ಪಪೂಶಿ/ಶೈಶಾ-04/ಸು-2/2017-18 ದಿನಾಂಕ:24-11-2017

ಸುತ್ತೋಲೆ

ವಿಷಯ: ಕರ್ನಾಟಕ ಸಾಹಿತ್ಯ ಅಕಾಡೆಮಿಯು ಪದವಿ ಪೂರ್ವ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿರುವ ಕಾರ್ಯಕ್ರಮಕ್ಕೆ ಸಹಕಾರ ಕೋರಿ.

ಉಲ್ಲೇಖ: ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ ರವರ ಪತ್ರ ಸಂಖ್ಯೆ ಕ್ರಕಸಾಅ.ಯುವಕಾವ್ಯಾಭಿಯಾನ-44/2017-18, ದಿನಾಂಕ: 04-11-2017.

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ರಾಜ್ಯದ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಯುವಕರಲ್ಲಿ ಸಾಹಿತ್ಯಾಸಕ್ತಿಯನ್ನು ಮೂಡಿಸುವ ಹಾಗೂ ಅವರಲ್ಲಿರುವ ಸೃಜನಶೀಲ ಪ್ರತಿಭೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯದಾದ್ಯಂತ 'ಯುವ ಕಾವ್ಯಾಭಿಯಾನ' ಯೋಜನೆಯನ್ನು ಹಮ್ಮಿಕೊಂಡಿರುತ್ತಾರೆ (ಪ್ರತಿಯನ್ನು ಮಾಹಿತಿಗಾಗಿ ಲಗತ್ತಿಸಿದೆ). ಸದರಿ ಕಾರ್ಯಕ್ರಮವನ್ನು ರಾಜ್ಯದಲ್ಲಿನ ಎರಡು ಅಕ್ಕಪಕ್ಕದ ಜಿಲ್ಲೆಗಳನ್ನು ಸೇರಿಸಿ ಎರಡೂ ಜಿಲ್ಲೆಗೆ ಕೇಂದ್ರಸ್ಥಾನವಾಗಿರುವ ಒಂದೆಡೆಯಲ್ಲಿ ಒಂದು ದಿನದ ಶಿಬಿರವನ್ನು 'ಇಂದಿನ ಯುವಕರೇ ಇಂದಿನ ಚಿಂತಕರು' ಘೋಷವಾಕ್ಯದಡಿಯಲ್ಲಿ ಏರ್ಪಡಿಸಿರುವ ಕಾರ್ಯಕ್ರಮಕ್ಕೆ ರಾಜ್ಯದ ಪ್ರತಿ ಪದವಿ ಪೂರ್ವ ಕಾಲೇಜಿನಿಂದ ಇಬ್ಬರು ಸಾಹಿತ್ಯಾಸಕ್ತ ಕಾವ್ಯ ರಚನೆಯಲ್ಲಿ ತೊಡಗಿಸಿಕೊಂಡಿರುವ ವಿದ್ಯಾರ್ಥಿಗಳನ್ನು ಸಂಬಂಧಪಟ್ಟ ಪ್ರಾಂಶುಪಾಲರು ಕನ್ನಡ ಉಪನ್ಯಾಸಕರ ಸಹಕಾರದೊಂದಿಗೆ ಗುರುತಿಸಿ ಅಕಾಡೆಮಿಗೆ ಅಂಚೆ ಮೂಲಕವಾಗಲಿ/ ಇ-ಮೇಲ್ ಮೂಲಕವಾಗಲಿ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಲು ತಿಳಿಸಿರುತ್ತಾರೆ.

ಈ ಶಿಬಿರದಲ್ಲಿ ಭಾಗವಹಿಸುವ ಶಿಭಿರಾರ್ಥಿಗಳಿಗೆ ಊಟದ ವ್ಯವಸ್ಥೆ ಮಾಡಿ ಬಂದು ಹೋಗುವ ಪ್ರಯಾಣವೆಚ್ಚಕ್ಕಾಗಿ ರೂ 300/-ಗಳನ್ನು ನೀಡುವುದಾಗಿ ತಿಳಿಸಿರುತ್ತಾರೆ. ತಮ್ಮ ಜಿಲ್ಲಾ ವ್ಯಾಪ್ತಿಗೆ ಒಳಪಡುವ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸದರಿ ಶಿಬಿರದಲ್ಲಿ ವಿದ್ಯಾರ್ಥಿಗಳು ಪಾಲ್ಗೊಳ್ಳುವ ಕುರಿತು ಅಗತ್ಯ ಕ್ರಮಕ್ಕಾಗಿ ಸೂಚಿಸಲು ತಿಳಿಸಿದೆ.

ಜಂಟಿ ನಿರ್ದೇಶಕರು(ಶೈಕ್ಷಣಿಕ),
ಪದವಿ ಪೂರ್ವ ಶಿಕ್ಷಣ ಇಲಾಖೆ

ಮುಂದಿನ ಕ್ರಮಕ್ಕಾಗಿ:-

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ನಿರ್ದೇಶಕರ ಆಪ್ತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ಮಾಹಿತಿಗಾಗಿ.
3. ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು-02.
4. ಇ-ಆಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಅಳವಡಿಸಲು ಮುಂದಿನ ಕ್ರಮಕ್ಕಾಗಿ.
5. ಕಛೇರಿ ಪ್ರತಿ

ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ-ಬೆಂಗಳೂರು

# 'ಯುವ ಕಾವ್ಯಾಭಿಯಾನ'

ಯುವ ಬರಹಗಾರರನ್ನು ಸಾಹಿತ್ಯ ಕ್ಷೇತ್ರಕ್ಕೆ ಲೋಹ ಚುಂಬಕದಂತೆ (Magnate) ಆಕರ್ಷಿಸುವ ದೃಷ್ಟಿಯಿಂದ ಕರ್ನಾಟಕ ಸಾಹಿತ್ಯ ಅಕಾಡೆಮಿಯು ರಾಜ್ಯ ಮಟ್ಟದಲ್ಲಿ ಯುವ ಕಾವ್ಯ ಅಭಿಯಾನದ ಶೀರ್ಷಿಕೆಯ ಅಡಿಯಲ್ಲಿ ರಾಜ್ಯದಾದ್ಯಂತ ಕಾವ್ಯ ಕಮ್ಮಟಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಕಾವ್ಯಾಭಿಯಾನದ ಕಮ್ಮಟವು ರಾಜ್ಯದ ಹದಿನೈದು ಭಾಗಗಳಲ್ಲಿ ನಡೆಯಲಿದೆ. ಪ್ರತಿಯೊಂದು ಭಾಗದ ಕಮ್ಮಟವು ಎರಡು ಜಿಲ್ಲೆಗಳನ್ನು ಒಳಗೊಂಡಿರುತ್ತದೆ. ಈ ಕಮ್ಮಟವನ್ನು ಎರಡು ಜಿಲ್ಲೆಗಳಲ್ಲಿರುವವರಿಗೂ ಅನುಕೂಲವಾಗುವ ಹಾಗೆ ಕೇಂದ್ರ ಪ್ರದೇಶದಲ್ಲಿ ಏರ್ಪಡಿಸಲಾಗುವುದು.

- ಕಮ್ಮಟಕ್ಕೆ ಅಭ್ಯರ್ಥಿಗಳ ಆಯ್ಕೆ
  ಕಮ್ಮಟಕ್ಕಾಗಿ 150 ಜನ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.

1. ಅಕಾಡೆಮಿಯು ಆಯಾಯ ಜಿಲ್ಲೆಯ ವ್ಯಾಪ್ತಿಯ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರಿಗೆ ಕಾಗದ ಬರೆದು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಕಳುಹಿಸಿ ಕೊಡಲು ಕೋರಿಕೊಳ್ಳಲಾಗುತ್ತದೆ. ವಿದ್ಯಾರ್ಥಿಯು ಈಗಾಗಲೇ ಸಾಹಿತ್ಯಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರೆ ಅಥವಾ ಆಸಕ್ತಿ ಹೊಂದಿದ್ದರೆ; ಆ ಬಗ್ಗೆ ವೈಯಕ್ತಿಕ ವಿವರಗಳನ್ನು ಪಡೆದು ಅರ್ಹತೆಯ ಆಧಾರದಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಸಾಮಾಜಿಕ ನ್ಯಾಯವನ್ನೂ ಪರಿಗಣನೆಗೆ ತೆಗೆದು ಕೊಳ್ಳಲಾಗುತ್ತದೆ. ಪ್ರತಿಯೊಂದು ಜಿಲ್ಲೆಯಿಂದ 50 ಜನ ಪದವಿ ಪೂರ್ವ ವಿದ್ಯಾರ್ಥಿಗಳ ಆಯ್ಕೆ ನಡೆಯುತ್ತದೆ. ಕಾರ್ಯಕ್ರಮ ಆಯಾ ಕ್ಷೇತ್ರದ ಎರಡೂ ಜಿಲ್ಲೆಗಳಿಂದಲೂ 100 ಜನರನ್ನು ಆಯ್ಕೆ ಮಾಡಿ, ಎರಡೂ ಜಿಲ್ಲೆಗಳ ಮಧ್ಯಂತರ ಸ್ಥಳದಲ್ಲಿ ಕಮ್ಮಟವನ್ನು ನಡೆಸಲಾಗುವುದು.
2. ಇದಲ್ಲದೇ ಉಳಿದ 50 ಅಭ್ಯರ್ಥಿಗಳನ್ನು ಎರಡೂ ಜಿಲ್ಲೆಗೆ ಸಂಬಂಧಿಸಿದಂತೆ ತಲಾ 25 ಜನರಂತೆ ಮುಕ್ತವಾಗಿ ಆಯ್ಕೆ ಮಾಡಿಕೊಳ್ಳಲಾಗುವುದು. ಇವರು 30 ವಯಸ್ಸಿನೊಳಗಿನವರಾಗಿರುತ್ತಾರೆ. ಮುಕ್ತವಾಗಿ ಆಯ್ಕೆಯಾಗಬಯಸುವ ಯುವ ಕವಿಗಳು ತಮ್ಮ ಅರ್ಹತೆ ವಿವರಗಳೊಂದಿಗೆ ಮನವಿಯನ್ನು ವಿಳಾಸ ಹಾಗೂ ಫೋನ್ ನಂಬರ್ ಸಹಿತ ಅಕಾಡೆಮಿಗೆ ಪತ್ರದ ಮೂಲಕ ಅಥವಾ ಅಕಾಡೆಮಿಯ ಇ ಮೇಲ್ ಮೂಲಕ /ಫೇಸ್‌ಬುಕ್/ ಟ್ವಿಟರ್/ಗೂಗಲ್+ ಮೂಲಕ ಅರ್ಜಿಯನ್ನು ಸಲ್ಲಿಸಬೇಕು, ಅಭ್ಯರ್ಥಿಗಳನ್ನು ಅರ್ಹತೆಯ ಆಧಾರದ ಮೇಲೆ ಅವಕಾಶ ನೀಡಲಾಗುವುದು.

- ಕಮ್ಮಟದ ಕಾರ್ಯಾಚರಣೆ ಸ್ವರೂಪ :

  1. ನಾಡಿನ ಹೆಸರಾಂತ ವಿಮರ್ಶಕರು ಹಾಗೂ ಕವಿಗಳ ಮುಖಾಮುಖಿಯೊಂದಿಗೆ ಉಪನ್ಯಾಸ ಮತ್ತು ಸಂವಾದದ ಕಾರ್ಯಕ್ರಮಗಳನ್ನು ನಡೆಸಲಾಗುವುದು.
  2. ಕಮ್ಮಟದಲ್ಲಿ ಭಾಗವಹಿಸುವ ಅಭ್ಯರ್ಥಿಗಳು ಕಮ್ಮಟ ನಡೆಯುವ ಸ್ಥಳದಲ್ಲಿ ಬೆಳಗಿನ 9-45 ಗಂಟೆಯೊಳಗೆ ಬಂದು ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳಬೇಕುತ್ತದೆ ಮತ್ತು ಸಂಜೆ 5-00 ಗಂಟೆಯವರೆಗೆ ಕಮ್ಮಟದಲ್ಲಿ ಹಾಜರಿರಬೇಕಾಗುತ್ತದೆ.
  3. ಈ ಕಾವ್ಯಕಮ್ಮಟದಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ಬೆಳಗಿನ ಉಪಹಾರ ಮಧ್ಯಾಹ್ನದ ಲಘು ಭೋಜನ ಮತ್ತು ಸಂಜೆಯ ಚಹಾ ವ್ಯವಸ್ಥೆ ಮಾಡಲಾಗುವುದು.
  4. ಕಮ್ಮಟದಲ್ಲಿ ಭಾಗವಹಿಸುವ ಪ್ರತಿಯೊಬ್ಬ ಅಭ್ಯರ್ಥಿಗೆ 300 ರೂ. ಪ್ರಯಾಣ ವೆಚ್ಚಕ್ಕಾಗಿ ಪ್ರಯಾಣಭತ್ಯೆ ಕೊಡಲಾಗುವುದು
  5. ಪ್ರತಿ ಅಭ್ಯರ್ಥಿಗೆ ಫೈಲ್, ನೋಟ್‌ಪ್ಯಾಡ್, ಪೆನ್ ಒದಗಿಸಲಾಗುವುದು.
  6. ಕಮ್ಮಟದಲ್ಲಿ ಭಾಗವಹಿಸಿದ್ದರ ಬಗ್ಗೆ ಅಭ್ಯರ್ಥಿಗಳಿಗೆ ಅಕಾಡೆಮಿಯು ಪ್ರಮಾಣ ಪತ್ರ ನೀಡಲಾಗುವುದು
  7. ಅಕಾಡೆಮಿ ಪ್ರಕಟಿಸಿದ ಕವನ ಸಂಕಲನವನ್ನು ನೆನಪಿನ ಕಾಣಿಕೆಯಾಗಿ ಕೊಡಲಾಗುವುದು.
  8. ಕಮ್ಮಟದ ವಿಭಾಗವಾರು ವಿಂಗಡಣೆ

1. ಕಲಬುರ್ಗಿ-ಬೀದರ್, 2. ಬೆಂಗಳೂರು ನಗರ-ರಾಮನಗರ, 3. ಮೈಸೂರು-ಕೊಡಗು, 4. ವಿಜಯಪುರ-ಬಾಗಲಕೋಟೆ
5 ಯಾದಗಿರಿ-ರಾಯಚೂರು, 6. ಕೊಪ್ಪಳ-ಬಳ್ಳಾರಿ, 7, ಧಾರವಾಡ-ಬೆಳಗಾವಿ, 8. ಗದಗ- ಹಾವೇರಿ,
9 ಉತ್ತರ ಕನ್ನಡ- ಶಿವಮೊಗ್ಗ, 10. ದಾವಣಗೆರೆ-ಚಿತ್ರದುರ್ಗ, 11. ಬೆಂಗಳೂರು ಗ್ರಾಮಾಂತರ- ತುಮಕೂರು,
12. ಕೋಲಾರ-ಚಿಕ್ಕಬಳ್ಳಾಪುರ, ಮಂಡ್ಯ-ಚಾಮರಾಜ ನಗರ, 14. ಹಾಸನ-ಚಿಕ್ಕಮಗಳೂರು, 15. ಉಡುಪಿ- ದಕ್ಷಿಣ ಕನ್ನಡ

ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-560002
(ದೂ: 080-22211730/22106460 Email: sahithya.academy@gmail.com)

# 'ಯುವ ಕಾವ್ಯಾಭಿಯಾನ' ಅರ್ಜಿ

| | | |
|---|---|---|
| 1. | ಹೆಸರು | |
| 2. | ಲಿಂಗ | ಮಹಿಳೆ/ ಪುರುಷ |
| 2. | ವರ್ಗ | ಸಾಮಾನ್ಯ / ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ |
| 3. | ಹುಟ್ಟಿದ ದಿನಾಂಕ | |
| 4. | ವಯಸ್ಸು | |
| 5. | ಊರು | |
| 6. | ಜಿಲ್ಲೆ | |
| 7. | ವೃತ್ತಿ/ ಪ್ರವೃತ್ತಿ (ಹೊರ ಅಭ್ಯರ್ಥಿಯಾದಲ್ಲಿ) | |
| 8. | ಪ್ರಕಟಿತ ಕೃತಿಗಳು / ಕವನಗಳು | |
| 9. | ಭಾಗವಹಿಸಿದ ಕವಿಗೋಷ್ಠಿಗಳು | |
| 10. | ವಿದ್ಯಾರ್ಥಿಯ ಸಂಸ್ಥೆಯ ಹೆಸರು | |
| 11. | ದೂರವಾಣಿ ಸಂಖ್ಯೆ | |
| 12. | ಈ ಮೇಲ್ | |
| 13. | ಅಂಚೆ ವಿಳಾಸ | |

ದಿನಾಂಕ:
ಸ್ಥಳ:

ಅಭ್ಯರ್ಥಿಯ ಸಹಿ ಪ್ರಾಚಾರ್ಯರು